# ಎಲ್ಲೆಡೆ ಭ್ರಷ್ಟಾಚಾರ, ಜನರ ಗ್ರಹಚಾರ

▪ ವಿಕ ಸುದ್ದಿಲೋಕ ತುಮಕೂರು

ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳ ಕಪಿಮುಷ್ಟಿಯಲ್ಲಿ ದೇಶದ ಆಡಳಿತ ಸಿಲುಕಿ ನಲುಗುತ್ತಿದ್ದು, ಜನಸಾಮಾನ್ಯರ ಬವಣೆ ಹೇಳತೀರದಾಗಿದೆ ಎಂದು ಕರ್ನಾಟಕ ಕಾನೂನು ವಿವಿ ಕುಲಪತಿ ಡಾ.ಜೆ.ಎಸ್. ಪಾಟೀಲ್ ವಿಷಾದಿಸಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಹಾಗೂ ವಿದ್ಯೋದಯ ಕಾನೂನು ಕಾಲೇಜು ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಗುರುವಾರ ನಡೆದ ಮಾಹಿತಿ ಹಕ್ಕು ಕಾಯಿದೆ ಮತ್ತು ಭ್ರಷ್ಟಾಚಾರ ನಿಯಂತ್ರಣ ಕುರಿತ ರಾಜ್ಯಮಟ್ಟದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಐಎಎಸ್-ಐಪಿಎಸ್ ಅಧಿಕಾರಿಗಳು ಅನೇಕ ಸಂದರ್ಭದಲ್ಲಿ ಜನಪ್ರತಿನಿಧಿಗಳನ್ನು ಯಾಮಾರಿಸಿ ಆಡಳಿತ ನಡೆಸುತ್ತಿದ್ದಾರೆ. ಜನಸಾಮಾನ್ಯರಿಗೆ ಅನುಕೂಲವಾಗುವಂಥ ಯೋಜನೆ ಅನುಷ್ಠಾನಗೊಳಿಸುವಲ್ಲಿ, ಮೂಲಸೌಲಭ್ಯಗಳನ್ನು ಕಲ್ಪಿಸುವಲ್ಲಿ ಅಧಿಕಾರಿಗಳು ಎಡವಿದ್ದು, ಕಾನೂನು ತಾಂತ್ರಿಕತೆಯ ನೆಪದಲ್ಲಿ ಅಭಿವೃದ್ಧಿ ಕಾರ್ಯಗಳಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂದರು.

**ನ್ಯಾಯಾಂಗ ಸಾರ್ವಜನಿಕ ಪ್ರಾಧಿಕಾರವಲ್ಲವೇ?:** ಸಾರ್ವಜನಿಕ ಸ್ವಾಮ್ಯದ ಸರಕಾರಿ ಇಲಾಖೆ, ಪ್ರಾಧಿಕಾರಗಳೆಲ್ಲವೂ ಮಾಹಿತಿ ಹಕ್ಕು ಕಾಯಿದೆ ವ್ಯಾಪ್ತಿಗೆ ಬರುತ್ತವೆ. ನ್ಯಾಯಾಂಗ ಸಾರ್ವಜನಿಕ ಪ್ರಾಧಿಕಾರವಲ್ಲವೇ ಎಂಬ ಜಿಜ್ಞಾಸೆ ಇತ್ತೀಚೆಗೆ ಎದ್ದಿದೆ. ಕಾರಣ ಆರ್‌ಟಿಐ ಕಾಯಿದೆಯಡಿ ಅರ್ಜಿದಾರರೊಬ್ಬರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಆಸ್ತಿ ವಿವರ ಬಹಿರಂಗ ಪಡಿಸಿದ್ದಾರೆಯೇ ವಿವರ ನೀಡಿ ಎಂದು ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಸುಪ್ರೀಂಕೋರ್ಟ್ ಆಡಳಿತ ಸರ್ವೋಚ್ಚ ನ್ಯಾಯಮೂರ್ತಿಗಳು ಆಸ್ತಿ ವಿವರ ಬಹಿರಂಗಪಡಿಸಬೇಕಿಲ್ಲ ಎಂಬ ಉತ್ತರ ನೀಡಿ, ಆಸ್ತಿ ಬಹಿರಂಗಕ್ಕೆ ಅವಕಾಶ ನೀಡದಂತೆ ಸುಪ್ರೀಂಕೋರ್ಟ್ ಉನ್ನತ ಪೀಠಕ್ಕೆ ಮೇಲ್ಮನವಿ ಸಹ ಸಲ್ಲಿಸಿತು.

ಮತ್ತೊಂದು ಪ್ರಕರಣದಲ್ಲಿ ಕೆಲವು ನ್ಯಾಯಮೂರ್ತಿಗಳ ಭ್ರಷ್ಟಾಚಾರದ ಬಗ್ಗೆ ದೂರಿದ ಅರ್ಜಿದಾರರ ಮೇಲೆ ನ್ಯಾಯಾಂಗ ನಿಂದನೆ ಮೊಕದ್ದಮೆ ಹಾಕುವ ಬೆದರಿಕೆ ಸಹ ನ್ಯಾಯಾಂಗದಿಂದ ಬಂತು. ಇದೆಲ್ಲ ನೋಡಿದರೆ ನ್ಯಾಯಾಂಗ ಸಾರ್ವಜನಿಕ ಪ್ರಾಧಿಕಾರವಲ್ಲವೇ ಎಂಬ ಪ್ರಶ್ನೆ ಎದುರಾಗುತ್ತಿದೆ ಎಂದು ಹೇಳಿದರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸುಧಾರಣಾ ಸಂಸ್ಥೆಯ ನಿರ್ದೇಶಕ ಜೆ. ದಕ್ಷಿಣಾಮೂರ್ತಿ ಮಾತನಾಡಿ, ಫೆ.22ರಿಂದ ಆರಂಭಗೊಂಡು ಏ.16ರವರೆಗೆ ರಾಜ್ಯದ ನಾನಾ ಕಾಲೇಜುಗಳಲ್ಲಿ ಕಾನೂನು ಚಿಂತನಾ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ. ಹುಬ್ಬಳ್ಳಿ, ಚಿತ್ರದುರ್ಗದಲ್ಲಿ ಕಾರ್ಯಕ್ರಮ ಈಗಾಗಲೇ ನಡೆಸಿದ್ದು ತುಮಕೂರಿನ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ನಡೆಯುತ್ತಿರುವುದು 3ನೇ ಕಾರ್ಯಕ್ರಮವಾಗಿದೆ ಎಂದು ತಿಳಿಸಿದರು.

ವಿದ್ಯೋದಯ ಫೌಂಡೇಶನ್ ಮ್ಯಾನೇಜಿಂಗ್ ಟ್ರಸ್ಟಿ ಪ್ರೊ. ಎಚ್.ಎಸ್. ಶೇಷಾದ್ರಿ ಅಧ್ಯಕ್ಷತೆ ವಹಿಸಿದ್ದರು. ಪ್ರಿನ್ಸಿಪಾಲ್ ಪ್ರೊ.ಕೆ. ವೆಂಕಟಾಚಲಪತಿಸ್ವಾಮಿ, ವಿದ್ಯೋದಯ ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲ್ ಪ್ರೊ.ಕೆ. ಚಂದ್ರಣ್ಣ, ಸಂಚಾಲಕ ಎ. ನಾರಾಯಣಸ್ವಾಮಿ, ಗ್ರಾಹಕ ಜಾಗೃತಿ ಸಂಸ್ಥೆಯ ವೈ.ಮುರುಳೀಧರ್, ಡಾ.ಸೋಮು, ದಾವಣಗೆರೆಯ ಆರ್. ಎಲ್. ಕಾನೂನು ಕಾಲೇಜು ಪ್ರಿನ್ಸಿಪಾಲ್ ಡಾ. ರೆಡ್ಡಿ ಹಾಜರಿದ್ದರು.

ವಿಕ ಚಿತ್ರಲೋಕ



ತುಮಕೂರಿನ ವಿದ್ಯೋದಯ ಕಾನೂನು ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಮಾಹಿತಿ ಹಕ್ಕು ಕಾಯಿದೆ ಹಾಗೂ ಭ್ರಷ್ಟಾಚಾರ ನಿಯಂತ್ರಣ ಕುರಿತ ಕಾರ್ಯಾಗಾರವನ್ನು ಕಾನೂನು ವಿವಿ ಕುಲಪತಿ ಡಾ. ಜೆ.ಎಸ್.ಪಾಟೀಲ್ ಉದ್ಘಾಟಿಸಿದರು.

# 'RTI alone can't fight corruption'

Express News Service
Tumkur, March.10

REFORMS must be made at all levels and a sense of patriotism should be instilled among the masses as the RTI alone cannot check the corruption in the country, observed Karnataka Law University vice chancellor J S Patil here on Thursday.

Speaking after inaugurating the seminar on 'RTI and check on corruption' organized at Vidyodaya Law College, he regretted that the varsities which were to build strong characters of the students have been losing their own character owing to scams and controversies.

He said that the varsities and the teachers should set an example to the students by walking the talk and transcend the intellectual and social boundaries.

He said that they should not limit themselves to their traditional tasks of providing instruction and publishing books. They should also build a strong moral society.

Meanwhile, he listed out the efforts the Law Varsity has made to be a model to other institutions.

"The university buys 2.5 lakh metres of Khadi annually and distribute it among all its staff.

It has also made it compulsory for the students to wear khadi every Monday besides launching campaigns to spread awareness on alcoholism in rural areas," he added.

He said that the varsity has never involved in any scams or the controversies which shows its great strength and moral fiber.

The VC came down heavily on the bureaucrats alleging that they were misguiding the politicians instead of guiding them properly.

The president of Vidyodaya Foundation and veteran criminal lawyer H S Sheshadri, experts Dr B N Reddy and Dr G M Mallikarjunaiah of KLE institution, prof K Chandranna, consumer rights activist Y G Muralidhara, lawyer cum academician S Ramesh and others were present.



Karnataka Law University VC Dr J S Patil addressing at a seminar on 'RTI and check on corruption' at Vidyodaya Law college in Tumkur on Thursday. | **Express Photo**




ತುಮಕೂರಿನ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ನಡೆದ ಕನ್ನಡದಲ್ಲಿ ಕಾನೂನು ವಿಚಾರ ಸಂಕಿರಣವನ್ನು ಉದ್ಘಾಟಿಸಿ ರಾಜ್ಯ ಕಾನೂನು ವಿ.ವಿ. ಉಪಕುಲಪತಿ ಜೆ.ಎಸ್.ಪಾಟೀಲ್ ಮಾತನಾಡಿದರು. ಜಿ. ದಕ್ಷಿಣಾಮೂರ್ತಿ, ಹೆಚ್.ಎಸ್. ಶೇಷಾದ್ರಿ, ಡಾ॥ ಬಿ.ಎಸ್. ರೆಡ್ಡಿ, ಡಾ॥ ಸೋಮು, ವೈ. ಮುರಳೀಧರ್ ಮುಂತಾದವರಿದ್ದರು.

## ಬದ್ಧತೆ ರಹಿತ ಅಧಿಕಾರಿಗಳಿಗೆ ಶಿಕ್ಷೆ: ಕಾನೂನು ತಿದ್ದುಪಡಿಗೆ ಸಲಹೆ

# ‘ಅಧಿಕಾರಿಗಳಿಂದ ಅಭಿವೃದ್ಧಿ ಕುಂಠಿತ’

ಪ್ರಜಾವಾಣಿ ವಾರ್ತೆ



ತುಮಕೂರು ವಿದ್ಯೋದಯ ಕಾನೂನು ಕಾಲೇಜಿನಲ್ಲಿ ಗುರುವಾರ ಏರ್ಪಡಿಸಿದ್ದ ‘ಮಾಹಿತಿ ಹಕ್ಕು ಮತ್ತು ಭ್ರಷ್ಟಾಚಾರ ನಿಯಂತ್ರಣ’ ಕುರಿತ ವಿಚಾರ ಸಂಕಿರಣವನ್ನು ಕಾನೂನು ವಿ.ವಿ. ಕುಲಪತಿ ಡಾ.ಜೆ.ಎಸ್.ಪಾಟೀಲ ಉದ್ಘಾಟಿಸಿದರು. ಕಾನೂನು ಮತ್ತು ಸಂಸದೀಯ ಸುಧಾರಣೆ ಸಂಸ್ಥೆ ನಿರ್ದೇಶಕ ಜಿ.ದಕ್ಷಿಣಾಮೂರ್ತಿ, ಪ್ರೊ.ಎಚ್.ಎಸ್.ಶೇಷಾದ್ರಿ, ಪ್ರಾಚಾರ್ಯ ಕೆ.ವೆಂಕಟಾಚಲಪತಿಸ್ವಾಮಿ ಮುಂತಾದವರು ಭಾಗವಹಿಸಿದ್ದರು.

ತುಮಕೂರು: ಐಎಎಸ್, ಐಪಿಎಸ್ ಅಧಿಕಾರಿಗಳನ್ನು ವಿಶ್ವವಿದ್ಯಾನಿಲಯಗಳಿಗೆ ನೇಮಕ ಮಾಡುವುದರಿಂದ ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಕಾನೂನು ವಿ.ವಿ. ಕುಲಪತಿ ಡಾ.ಜೆ.ಎಸ್.ಪಾಟೀಲ ಇಲ್ಲಿ ಗುರುವಾರ ಆಪಾದಿಸಿದರು.

ನಗರದ ವಿದ್ಯೋದಯ ಕಾನೂನು ಕಾಲೇಜಿನಲ್ಲಿ ರಾಜ್ಯ ಕಾನೂನು ಮತ್ತು ಸಂಸದೀಯ ಸುಧಾರಣೆ ಸಂಸ್ಥೆ ಆಶ್ರಯದಲ್ಲಿ ಗುರುವಾರ ಏರ್ಪಡಿಸಿದ್ದ ‘ಮಾಹಿತಿ ಹಕ್ಕು ಮತ್ತು ಭ್ರಷ್ಟಾಚಾರ ನಿಯಂತ್ರಣ’ ಕುರಿತ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು. ಆಡಳಿತ ವ್ಯವಸ್ಥೆ ಅಧಿಕಾರಿಗಳ ಕೈಗೆ ಸಿಕ್ಕಿ ನರಳುತ್ತಿದೆ. ಅಧಿಕಾರಿಗಳನ್ನು ಜನಪ್ರತಿನಿಧಿಗಳು ಸಹ ಏನೂ ಮಾಡಲಾಗುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಪ್ರತಿಯೊಂದು ಇಲಾಖೆಯ ಅಧಿಕಾರಿಗೆ ವೈಯಕ್ತಿಕ ಹೊಣೆಗಾರಿಕೆ ವಹಿಸಿ ಕಾನೂನು ತಿದ್ದುಪಡಿ ಮಾಡಬೇಕಾಗಿದೆ. ನಿಗದಿತ ಸಮಯಕ್ಕೆ ನಿಗದಿತ ಕೆಲಸವನ್ನು ಪೂರೈಸದಿದ್ದರೆ ಅಂತಹ ಬದ್ಧತೆ ಇಲ್ಲದ ಅಧಿಕಾರಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಶಿಕ್ಷಿಸುವಂತಹ ಕಾನೂನು ಅಗತ್ಯವಿದೆ. ಇಲ್ಲದಿದ್ದರೆ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಮೌಲ್ಯಾಧಾರಿತವಾಗಿರಬೇಕು. ಆದರೆ ಇಂದು ಈ ಬಗ್ಗೆ ಪ್ರಶ್ನಿಸುವುದು ಸಹ ಸಾಧ್ಯವಿಲ್ಲ. ಶಾಸಕಾಂಗದ ವ್ಯಕ್ತಿಯ ಮೇಲೆ ಭ್ರಷ್ಟಾಚಾರದ ಆರೋಪ ಬಂದರೆ ದೂರು ದಾಖಲಿಸಲು ರಾಜ್ಯಪಾಲರು ಅಥವಾ ರಾಷ್ಟ್ರಪತಿ ಒಪ್ಪಿಗೆ ಪಡೆಯಬೇಕು. ನ್ಯಾಯಾಧೀಶರು ಆಸ್ತಿ ಘೋಷಣೆ ಮಾಡುವ ಬಗ್ಗೆ ವಿವಾದವಾಗಿತ್ತು. ವಿವಾದವನ್ನು ಸುಪ್ರೀಂಕೋರ್ಟ್ ಕಾರ್ಯದರ್ಶಿಯೇ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರು. ನ್ಯಾಯಾಂಗ ಸಹ ಸರ್ಕಾರದ ಒಂದು ಸಂಸ್ಥೆ ಅಲ್ಲವೇ? ಆಸ್ತಿ ಘೋಷಣೆಯಿಂದ ಅವರು ಹೇಗೆ ಹೊರತು ಎಂದು ಅವರು ಪ್ರಶ್ನಿಸಿದರು.

ವಿದ್ಯೋದಯ ಸಂಸ್ಥೆ ಟ್ರಸ್ಟಿ ಪ್ರೊ.ಎಚ್.ಎಸ್.ಶೇಷಾದ್ರಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾನೂನು ಮತ್ತು ಸಂಸದೀಯ ಸುಧಾರಣೆ ಸಂಸ್ಥೆ ನಿರ್ದೇಶಕ ಜಿ.ದಕ್ಷಿಣಾಮೂರ್ತಿ, ಪ್ರಾಚಾರ್ಯ ಕೆ.ವೆಂಕಟಾಚಲಪತಿಸ್ವಾಮಿ, ಪ್ರಾಧ್ಯಾಪಕರಾದ ಡಾ.ಬಿ.ಎಸ್.ರೆಡ್ಡಿ, ವೈ.ಜಿ.ಮುರಳೀಧರ, ಡಾ.ಸೋಮು, ಪ್ರೊ.ಕೆ.ಚಂದ್ರಣ್ಣ, ಪ್ರೊ.ವೆಂಕಟಸ್ವಾಮಿ ಮುಂತಾದವರು ಭಾಗವಹಿಸಿದ್ದರು.